ಕರ್ನಾಟಕ ಸರ್ಕಾರ

ಸಂ. ಕಂಇ 158 ಟಿಎನ್‌ಆರ್ 2020(ಭಾ1)

ಕರ್ನಾಟಕ ಸರ್ಕಾರಿ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 30-05-2020

**ಆ ದೇ ಶ**

1. ರಾಜ್ಯ ಸರ್ಕಾರವು ಆದೇಶ ಸಂಖ್ಯೆ ಕಂಇ 158 ಟಿಎನ್‌ಆರ್ 2020, ದಿ.18.05.2020ರಂದು ಕೋವಿಡ್- 19 ಸೋಂಕು ಹರಡುವಿಕೆಯನ್ನು ನಿಯಂತ್ರಿಸಲು ಲಾಕ್‌ಡೌನ್ ಕ್ರಮಗಳ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಇವುಗಳು ರಾಜ್ಯಾದ್ಯಂತ ದಿ.18.05.2020 ರಿಂದ ದಿ.31.05.2020 ರವರೆಗೆ ಜಾರಿಯಲ್ಲಿರುತ್ತವೆ.

2. ಸದರಿ ಆದೇಶದ ಮಾರ್ಗಸೂಚಿಗಳ ಕ್ರಮ ಸಂ.6 (**ಕರ್ಫ್ಯೂ**) ರಲ್ಲಿ ಈ ಕೆಳಕಂಡಂತಿರುತ್ತದೆ;

   "ಪ್ರತಿ ದಿನ ರಾತ್ರಿ 7.00 ರಿಂದ ಬೆಳಿಗ್ಗೆ 7.00ರವರೆಗೆ ಎಲ್ಲಾ ಅವಶ್ಯಕವಲ್ಲದ ಚಟುವಟಿಕೆಗಳ ವ್ಯಕ್ತಿಗಳ ಸಂಚಾರವನ್ನು ಕಟ್ಟುನಿಟ್ಟಾಗಿ ನಿಷೇಧಿಸತಕ್ಕದ್ದು. ಭಾನುವಾರದಂದು ಹೆಚ್ಚುವರಿಯಾಗಿ ಬೆಳಿಗ್ಗೆ 7.00 ರಿಂದ ಸಂಜೆ 7.00 ರವರೆಗೆ ಸಹ ಎಲ್ಲಾ ಅವಶ್ಯಕವಲ್ಲದ ಚಟುವಟಿಕೆಗಳ ವ್ಯಕ್ತಿಗಳ ಸಂಚಾರವನ್ನು ನಿಷೇಧಿಸಿದೆ (**ಭಾನುವಾರದಂದು ಪೂರ್ಣ ದಿನದ ಲಾಕ್‌ಡೌನ್ ಇರುತ್ತದೆ**). ಈ ಉದ್ದೇಶಕ್ಕಾಗಿ Cr.P.C section 144 ರಡಿಯಲ್ಲಿ ನಿಷೇಧಾತ್ಮಕ ಆದೇಶ (ಕರ್ಫ್ಯೂ)ವನ್ನು ಸ್ಥಳೀಯ ಪ್ರಾಧಿಕಾರಗಳ ವತಿಯಿಂದ ಆದೇಶಗಳನ್ನು ಹೊರಡಿಸಿ, ಕಟ್ಟುನಿಟ್ಟಿನ ಅನುಪಾಲಯನೆಯನ್ನು ಖಾತರಿಪಡಿಸತಕ್ಕದ್ದು."

3. ಸಾರ್ವಜನಿಕರ ಕೋರಿಕೆಯ ಹಿನ್ನಲೆಯಲ್ಲಿ ಮೇಲಿನ ಆದೇಶದಲ್ಲಿ "ಭಾನುವಾರದಂದು ಪೂರ್ಣ ದಿನದ ಲಾಕ್‌ಡೌನ್" ಎಂದು ಆದೇಶಿಸಲಾಗಿರುವುದನ್ನು ಮಾರ್ಪಡಿಸಿ, <u>ದಿನಾಂಕ: 31-5-2020ರ ಭಾನುವಾರದಂದು ಬೆಳಿಗ್ಗೆ 7.00 ರಿಂದ ರಾತ್ರಿ 7.00 ರವರೆಗೆ ಕರ್ಫ್ಯೂವನ್ನು ತೆರವುಗೊಳಿಸಿ ವಿನಾಯಿತಿ ನೀಡಿ ಆದೇಶಿಸಿದೆ.</u> ಮುಂದುವರೆದು, ರಾತ್ರಿ 7.00 ರಿಂದ ಬೆಳಿಗ್ಗೆ 7.00ರ ವರೆಗೆ ಯಥಾಪ್ರಕಾರ ಕರ್ಫ್ಯೂ ಜಾರಿಯಲ್ಲಿರುತ್ತದೆ.

4. ಈ ಆದೇಶವನ್ನು ಕರ್ನಾಟಕ ಸರ್ಕಾರದ ಎಲ್ಲಾ ಇಲಾಖೆಗಳಿಗೆ, ಜಿಲ್ಲಾಧಿಕಾರಿಗಳಿಗೆ, ಪೋಲೀಸ್ ವರಿಷ್ಠಾಧಿಕಾರಿಗಳಿಗೆ, ಆಯುಕ್ತರು, ಬಿಬಿಎಂಪಿ, ಪೋಲೀಸ್ ಕಮೀಷನರ್ ಮತ್ತು ಇತರ ಇಲಾಖಾ ಮುಖ್ಯಸ್ಥರುಗಳು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಈ ಮೂಲಕ ಆದೇಶಿಸಲಾಗಿದೆ.

(ಟಿ.ಎಂ.ವಿಜಯ್ ಭಾಸ್ಕರ್)
ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ
ಕಾರ್ಯಕಾರಿ ಸಮಿತಿ ಅಧ್ಯಕ್ಷರು

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.